ದಿನಾಂಕ: 11.04.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಶ್ರೀ. ಎಂ.ಎಸ್.ಜಿ. ವಕೀಲರಿಂದ :-

2) ನನ್ನ ಮತ್ತು ಮೂಲ ವಾದಿ ಡಾ.ಶಿವಾನಂದ್ ರವರ ಮದುವೆ ಎಪ್ರಿಲ್ 24, 1975 ರಲ್ಲಿ ಆಗಿತ್ತು. ಮದುವೆಯ ಮುಂಚೆ ನನ್ನ ಮತ್ತು ಡಾ.ಶಿವಾನಂದ್ ರವರ ಕುಟುಂಬಕ್ಕೆ ಸಂಬಂಧ ಇತ್ತು, ಡಾ.ಶಿವಾನಂದ್ ರವರ ಸೊದರತ್ತೆ ನನ್ನ ತಾಯಿಗೆ ಸಂಬಂಧಿಕರಾಗಬೇಕು. ನನ್ನ ಮದುವೆಯ ಮುಂಚೆ ಡಾ.ಶಿವಾನಂದ್ ರವರು ಕೆ.ಎಂ.ಸಿ ಮಣಿಪಾಲದಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಮದುವೆಯಾದ ಸಮಯದಲ್ಲಿ ನನ್ನ ಮಾವ ಗಣಪತಿ ಭಟ್ ರವರು ಜೀವಂತ ಇದ್ದರು. ನನ್ನ ಅತ್ತೆ ಆಗ ಜೀವಂತ ಇರಲಿಲ್ಲ. ನನ್ನ ಅತ್ತೆ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಮತ್ತು ಡಾ.ಶಿವಾನಂದ್ ಇಬ್ಬರು ಒಂದೇ ತಂದೆಯ ಮಕ್ಕಳು, ತಾಯಿ ಬೇರೆ ಬೇರೆ ಎಂದರೆ ಸರಿ. ನನ್ನ ಮದುವೆಯ ಮುಂಚೆ 2ನೇ ಪ್ರತಿವಾದಿಯ ತಾಯಿ ನನ್ನ ಮಾವ ಗಣಪತಿ ಭಟ್ ರವರ ಜೊತೆ ಮದುವೆಯಾಗಿತ್ತು. ನನ್ನ ಗಂಡ ಡಾ.ಶಿವಾನಂದ್ ರವರ ತಾಯಿಯ ಹೆಸರು ಭವಾನಿ. 2ನೇ ಪ್ರತಿವಾದಿ ಸೂರ್ಯನಾರಾಯಣ ರವರ ತಾಯಿ ಹೆಸರು ಮೀನಾಕ್ಷಮ್ಮ. ನೀವು ಮದುವೆಯಾದ ನಂತರ ಮಣಿಪಲ್ ನಲ್ಲಿ ಯೇ ಇದ್ದರು, ಹಬ್ಬ ಮದುವೆಗಳಿಗೆ ಮಾತ್ರ ಬರುತ್ತೀದ್ದಿರಿ ಎಂದರೆ ಸಾಕ್ಷಿ ಎಲ್ಲಾ ಕಾರ್ಯಕ್ರಮಗಳಿಗೆ ಮತ್ತು ರಜೆ ದಿನಗಳಲ್ಲಿ ಯಾರಿಗಾದರೂ ಹುಷಾರಿಲ್ಲದ ಸಮಯದಲ್ಲಿ ಸಹಾಯ ಮಾಡಲು ಬರುತ್ತಿದ್ದೆವು.

3) ನನ್ನ ಮಾವನ ತಂದೆಯ ಹೆಸರು ಶಿವ ಭಟ್ ಎಂದರೆ ಸರಿ. ಶಿವ ಭಟ್ ರಿಗೆ ಇಬ್ಬರು ಮಕ್ಕಳು, ಒಬ್ಬರು ನನ್ನ ಮಾವ ಗಣಪತಿ ಭಟ್ ಮತ್ತೊಬರು ರಾಮ ಭಟ್. ಶಿವ ಭಟ್ ರಿಗೆ ಇಬ್ಬರು ಹೆಂಡತಿಯರು ಮೊದಲನೇ ಹೆಂಡತಿ ಭೀಷಮ್ಮ, 2ನೇ ಹೆಂಡತಿ ರುಕ್ಮಿಣಿ. ನಿಮ್ಮ ಮಾವನ ತಾಯಿಯ ಹೆಸರು ಭೀಷಮ್ಮ ಇರಬೇಕು, ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ಮಾವನ 2ನೇ ಹೆಂಡತಿ ಮೀನಾಕ್ಷಮ್ಮ 25-30 ವರುಷದ ಹಿಂದೆ ತೀರಿಕೊಂಡಿರುತ್ತಾರೆ. ಗಣಪತಿ

ಭಟ್ ನನ್ನ ಮಾವ ಮತ್ತು ಅವರ ಸಹೋದರ ರಾಮ್ ಭಟ್ ಇಬ್ಬರು ಒಟ್ಟು ಕುಟುಂಬದಲ್ಲೆ ಇದ್ದರು. ಮೊದಲಿಗೆ ಎಲ್ಲಾರು ಒಂದೇ ಮನೆಯಲ್ಲಿ ಒಟ್ಟಿಗೆ ಇದ್ದೆವು, ಈಗ 7 ವರುಷದ ಹಿಂದೆ ಕೊಟ್ಟಿಗೆ ಇದ್ದ ಜಾಗದಲ್ಲಿ ಮನೆ ಮಾಡಿಕೊಂಡಿರುತ್ತಾರೆ. ಗಣಪತಿ ಭಟ್ ರವರು ಅವರು ಕೊನೆಯವರೆಗೂ 2 ನೇ ಪ್ರತಿವಾದಿಯ ಮನೆಯಲ್ಲೆ ತೀರಿಕೊಂಡರು ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲೆ ಇದ್ದ ಮನೆಯಲ್ಲಿ ತೀರಿಕೊಂಡಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

4) ನನ್ನ ಮಾವನ ತಮ್ಮ 2 ನೇ ಪ್ರತಿವಾದಿ ವ್ಯವಸಾಯ ಹೊರತುಪಡಿಸಿ ಪೋರೋಹಿತಿಗೆ ಕೆಲಸವನ್ನು ಮಾಡುತ್ತಿದ್ದರು. ನನ್ನ ಮಾವ ಗಣಪತಿ ಭಟ್ ರವರು ಪೂರ್ಣವಧಿ ಪೋರೋಹಿತಿಗೆ ಮತ್ತು ಭವಿಷ್ಯ ಹೇಳುವ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಗಣಪತಿ ಭಟ್ ರಿಗೆ ಪೋರೋಹಿತಿಗೆ ಮತ್ತು ಭವಿಷ್ಯ ದಿಂದಲೂ ಆದಾಯ ಬರುತ್ತಿತ್ತು, ತೋಟದ ಆದಾಯವು ಸ್ವಲ್ಪ ಇರುತ್ತಿತು. ಗಣಪತಿ ಭಟ್ ರವರು ತನ್ನ ಹೆಣ್ಣು ಮಕ್ಕಳನ್ನು ಮದುವೆಗೆ ತನ್ನ ಸ್ವಂತ ದುಡಿಮೆಯಿಂದಲೆ ಒಡವೆ ಮಾಡಿಸಿ ಮದುವೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಎಲ್ಲಾ ಕುಟುಂಬದಿಂದಲೇ ಆಗಿರುತ್ತದೆ ಎಂದು ನುಡಿಯುತ್ತಾರೆ, ನನ್ನ ಮದುವೆಯ ನಂತರ 2 ನೇ ಮಗಳ ಮದುವೆಯಾಗಿರುತ್ತದೆ, ನನ್ನ ಮದುವೆಯ ಮುಂಚೆ 1 ನೇ ಮಗಳ ಮದುವೆಯಾಗಿರುತ್ತದೆ. ಡಾ.ಶಿವಾನಂದ್ ರವರು 1 ನೇ ವಾದಿ ಮಣಿಪಾಲ್ ನಲ್ಲಿ ಸ್ವಂತ ಮನೆ ಮಾಡಿದ್ದರು ಎಂದರೆ ಸರಿ. ಮಣಿಪಾಲ್ ನಲ್ಲಿರುವ ಮನೆಯನ್ನು ಗಣಪತಿ ಭಟ್ ರೇ ಪರ್ಮಿಟ್ ಹಾಕಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವ ಹಾಗೆ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಗಣಪತಿ ಭಟ್ ರವರ ಖಾತೆಯಿಂದ 1 ನೇ ವಾದಿ ಡಾ.ಶಿವಾನಂದ್ ರವರು ಹಣ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

5) ಗಣಪತಿ ಭಟ್ ರು ಒಟ್ಟು ಕುಟುಂಬದ ಯಜಮಾನಿಗೆ ಮಾಡುತ್ತಿದ್ದರು. ಗಣಪತಿ ಭಟ್ ರು ಪೂರ್ಣವಧಿ ಪುರೊಹಿತೆಗೆ ಕೆಲಸ ಮಾಡುತ್ತಿದ್ದರಿಂದ ಮನೆಯ ಯಜಮಾನಿಕೆ ಮಾಡುತ್ತಿರಲಿಲ್ಲ ಎಂದರೆ ಸಾಕ್ಷಿ ಇಬ್ಬರು ಕೆಲಸ ಹಂಚಿಕೊಂಡು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಗಣಪತಿ ಭಟ್ ರು ಜೀವಿತ ಕಾಲದಲ್ಲಿ ಅವರ ತಿಳುವಳಿಕೆ ಮಾಡಿಕೊಂಡು

ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿರಲಿಲ್ಲ, ಅವರ ಮರಣದ ನಂತರ ಮಾಡಿಕೊಂಡಿರುತ್ತಾರೆ, ಈಗ 15 ವರುಷದ ಹಿಂದೆ ಯಿಂದ ಮಾಡಿಕೊಂಡಿರುತ್ತಾರೆ. ಯಾವ ತಿಂಗಳು ಯಾವ ಇಸವಿಯಿಂದ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ. ಆ ದಿನ ನಾನು ಹಾಜರಿರಲಿಲ್ಲ. ಒಡಂಬಡಿಗೆ ಅಥವಾ ತಿಳುವಳಿಕೆ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ನೀಡಿರುತ್ತೇವೆ. ಐಟಂ ನಂ.3, 6 ರಿಂದ 11, ಗಣಪತಿ ಭಟ್ ರವರ ಹೆಸರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಐಟಂ ನಂ.3, 6 ರಿಂದ 11, ಇವತ್ತಿಗೂ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಹಾಕಲು 1ನೇ ಪ್ರತಿವಾದಿ ಮತ್ತು ಅವರ ಮಕ್ಕಳು, 1ನೇ ವಾದಿಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮದುವೆಯಾಗಿ ಹೋದಾಗ 1975 ನೇ ಇಸವಿಯಲ್ಲಿ ಕೊಟ್ಟಿಗೆ ಇತ್ತು. 2ನೇ ಪ್ರತಿವಾದಿ ತನ್ನ ಪ್ರತಿವಾದಿ ಪತ್ತದಲ್ಲಿ ನಿಮ್ಮ ಮಾವ 1ನೇ ವಾದಿ ಮತ್ತು 2ನೇ ಪ್ರತಿವಾದಿ ಇರಲು ಕಟ್ಟಿಸಿದ ಮನೆ ಎಂದು ಹೇಳಿರುತ್ತಾರೆ ಅದು ನಿಜವೋ, ಕೊಟ್ಟಿಗೆ ಇದ್ದಿದ್ದು ನಿಜವೋ ಎಂದರೆ ಸಾಕ್ಷಿ ಕೊಟ್ಟಿಗೆ ಇದ್ದಿದ್ದು ನಿಜ ಎಂದು ನುಡಿಯುತ್ತಾರೆ. 15 ವರುಷದ ಹಿಂದೆ ಗಣಪತಿ ಭಟ್ ಮತ್ತು ರಾಮ್ ಭಟ್ ಒಡಂಬಡಿಕೆ ಮಾಡಿಕೊಂಡು ಯಾವ ಯಾವ ಆಸ್ತಿಗಳನ್ನು ಹಂಚಿಕೊಂಡಿದ್ದರು ಎಂದು ನನಗೆ ಮಾಹಿತಿ ಇಲ್ಲ. ಕೆಲವೊಂದು ಆಸ್ತಿಗಳು ಗಣಪತಿ ಭಟ್ ಮತ್ತು ರಾಮ್ ಭಟ್ ರವರ ಜಂಟಿ ಹೆಸರಿನಲ್ಲಿ ಯಾಕೆ ಇವೆ, ಐಟಂ ನಂ.3, 6 ರಿಂದ 11 ಪ್ರತ್ಯೇಕವಾಗಿ ರಾಮ ಭಟರ ಹೆಸರಿಗೆ ಯಾಕೆ ನಮೂದು ಯಾಗಿದೆ ಎಂದರೆ ಸಾಕ್ಷಿ ರಾಮ್ ಭಟ್ ರು ಯಜಮಾನಿಗೆ ಮಾಡುತ್ತಿದ್ದರಿಂದ ಅವರ ಹೆಸರಿಗೆ ಬಂದಿದೆ ಎಂದು ನುಡಿಯುತ್ತಾರೆ. ಐಟಂ ನಂ.4 ರಾಮ ಭಟ್ ಮತ್ತುಗಣಪತಿ ಭಟ್ ಇಬ್ಬರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಅಣ್ಣ ತಮ್ಮಂದಿರಲ್ಲಿ ರಾಮ ಭಟ್ ರು ದೊಡ್ಡವರು.

6) ನಿಮ್ಮ ಕುಟುಂಬ ಬಹಳ ಹಳೆಯ ಕುಟುಂಬ ಮತ್ತು ಅನುಕೂಲಸ್ತ ಕುಟುಂಬ ಎಂದರೆ ಸರಿ. ಗಣಪತಿ ಹಬ್ಬ ನವರಾತ್ರಿ ದೀಪಾವಳಿ ಹಬ್ಬಗಳನ್ನು ವಿಜ್ಯಂಭಣೆಯಿಂದ ಮಾಡುತ್ತಿದ್ದರು ಎಂದರೆ ಸರಿ. ಮದುವೆ ಹಬ್ಬಗಳಲ್ಲಿ ಸಾವಿರಾರು ಜನ ಕ್ಕೆ ಊಟ ಮಾಡಿಸುವಷ್ಟು ಪಾತ್ರೆಗಳು ಮನೆಯಲ್ಲಿ ಇದ್ದವು ಎಂದರೆ ಸರಿ. ಮನೆತನದ ಬಂಗಾರ ಇದೆ,

ಅದು ಎಷ್ಟು ಇದೆ ಎಂದು ಗೊತ್ತಿಲ್ಲ. ಮನೆತನದ ದೇವರಿಗೆ ಹಾಕಿರುತ್ತಾರೆ. ದೇವರಿಗೆ ಹಾಕಲು ಪ್ರತ್ಯೇಕವಾಗಿ ಆಭರಣಗಳು ಇರಲಿಲ್ಲ. ಬಂಗಾರ ಮತ್ತು ಪಾತ್ರೆಗಳನ್ನು ಈ ದಾವೆಯಲ್ಲಿ ಹಿಸ್ಸೆಗಾಗಿ ಹಾಕಿಲ್ಲ ಎಂದರೆ ಸರಿ. ಅವುಗಳೆಲ್ಲಾ ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಅ ಬೀಗ ಮೂಲಮನೆಯಲ್ಲಿ ಯಾರು ಇದ್ದಾರೆ ಅ ಮನೆಯಲ್ಲಿ ಇದೆ. 1ನೇ ವಾದಿಯ ಹತ್ತಿರ ಅದರ ಬೀಗ ಇಲ್ಲ. ನಿಪಿ-16 ಒಂದೇ ದಾಖಲೆ ಒಟ್ಟು ಕುಟುಂಬದ ಮನೆ ಇರುವ ದಾಖಲೆ.

_ಮುಂದುವರೆದ_ಪಾಟೀ_ಸವಾಲಿಗೆ_ಮುಂದುಡಲಾಯಿತು._

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ